## ನಿಮ್ಮೊಡನೆ

# ಮಕ್ಕಳ ಸುರಕ್ಷತೆ ಮಕ್ಕಳಾಟವಲ್ಲ..

ನಮ್ಮಲ್ಲಿ ಎಳೆಯರ ಸುರಕ್ಷತೆ ಎನ್ನುವುದು ಕನಿಷ್ಠ ಆದ್ಯತೆಯ ಸಂಗತಿಯಾಗಿದೆ. ಮಕ್ಕಳ ಸುರಕ್ಷತೆಯ ಬಗ್ಗೆ ಸಾಕಷ್ಟು ನಿಗಾ ವಹಿಸದಿರುವುದು ಲೋಪವಷ್ಟೇ ಅಲ್ಲ, ಅದೊಂದು ಸಾಮಾಜಿಕ ಪಾತಕವೂ ಹೌದು.

ಈ ದೇಶದ ಮಕ್ಕಳ 'ಸೌಭಾಗ್ಯ'ಕ್ಕೆ ಎಣೆಯೇ ಇರುವಂತಿಲ್ಲ. ಅಪೌಷ್ಟಿಕತೆಯನ್ನು ಹುಟ್ಟಿನೊಂದಿಗೇ ಬಳುವಳಿಯಾಗಿ ಪಡೆದುಕೊಂಡು ಬಂದ ಕೋಟ್ಯಂತರ ಮಕ್ಕಳು ಸಮಾಜದಲ್ಲಿದ್ದಾರೆ. ಆಡುತ್ತಾ ಕಲಿಯಬೇಕಾದ ಕೋಟಿ ಕೋಟಿ ಮಕ್ಕಳು ಬೀದಿಗಳಲ್ಲಿ ತಮ್ಮ ಭಾಗ್ಯರೇಖೆಗಳ ಹುಡುಕಾಟದಲ್ಲಿದ್ದಾರೆ. ಇದರ ಜೊತೆಗೆ ಕಾಮುಕರ ಕಾಕದೃಷ್ಟಿ, ಹಿರಿಯರ ಮೂಢನಂಬಿಕೆ, ಬಡತನ, ಜೀತ, ಸೇರಿದಂತೆ ಹಲವು ಅಗ್ನಿಪರೀಕ್ಷೆಗಳನ್ನು ಎಳೆಯರು ಎದುರಿಸಬೇಕಾಗಿದೆ. ಇಂಥ ಸಂದರ್ಭದಲ್ಲಿ 'ಮಕ್ಕಳ ಹಕ್ಕುಗಳು' ನಗೆಚಾಟಿಕೆಯ ಮಾತುಗಳಾಗಿವೆ. ಇದರ ಜೊತೆಗೆ ಪಾಲಕರು ಮತ್ತು ನೆರೆಹೊರೆಯವರ ನಿರ್ಲಕ್ಷ್ಯ ಕೂಡ ಮಕ್ಕಳ ಜೀವಕ್ಕೆ ಮುಳುವಾಗಿ ಪರಿಣಮಿಸುತ್ತಿವೆ. ಕಳೆದ ವಾರ ನಡೆದ ಕೆಲವು ಘಟನೆಗಳಂತೂ ಮಕ್ಕಳ ಸುರಕ್ಷತೆಯ ಬಗ್ಗೆ ಸಮಾಜದಲ್ಲಿ ಇರುವ ನಿರ್ಲಕ್ಷ್ಯಕ್ಕೆ ಉದಾಹರಣೆಗಳಂತಿವೆ.

ಬೆಂಗಳೂರಿನ ಮೂವರು ಮಕ್ಕಳು ಒಂದೇ ವಾರದ ಅವಧಿಯಲ್ಲಿ ನೀರಿನಲ್ಲಿ ಮುಳುಗಿ ಸಾವಿಗೀಡಾಗಿದ್ದಾರೆ. 13 ವರ್ಷದ ಬಾಲಕನೊಬ್ಬ ಶಾಲೆಯಲ್ಲಿನ ಈಜುಕೊಳದಲ್ಲಿ ಮುಳುಗಿ ಸಾವನ್ನಪ್ಪಿದ್ದರೆ, 11 ವರ್ಷದ ಮತ್ತೊಬ್ಬ ಬಾಲಕ ಅಪಾರ್ಟ್‌ಮೆಂಟ್‌ನ ಈಜುಕೊಳದಲ್ಲಿ ಸಾವಿಗೀಡಾಗಿದ್ದಾನೆ. ಗಾಳಿ ಹೊರಗೆ ಹೋಗಲೆಂದು ಈಜುಕೊಳದಲ್ಲಿ ಕೊರೆಯಲಾಗಿದ್ದ ಕಿಂಡಿಯಲ್ಲಿ ಆಕಸ್ಮಿಕವಾಗಿ ಕೈ ಸಿಕ್ಕಿಕೊಂಡಿದ್ದರಿಂದ ಮುಂದಕ್ಕೆ ಈಜಲಾಗದೆ ಬಾಲಕ ಮುಳುಗಿದ್ದಾನೆ. 9 ವರ್ಷದ ಮತ್ತೊಬ್ಬ ಬಾಲಕಿ ಶಾಲೆಯಲ್ಲಿನ ತೆರೆದ ನೀರಿನ ಸಂಪ್‌ಗೆ ಬಲಿಯಾಗಿದ್ದಾಳೆ. ಬೆಳಗಾವಿ ಜಿಲ್ಲೆಯ ಖಾನಾಪುರ ತಾಲ್ಲೂಕಿನ ಗುಂಜಿ ಗ್ರಾಮದಲ್ಲಿ ಇಬ್ಬರು ಮಕ್ಕಳು ಕಾರಿನಲ್ಲಿ ಉಸಿರುಗಟ್ಟಿ ಸತ್ತಿದ್ದಾರೆ. ಇವುಗಳಲ್ಲಿ ಅಪಾರ್ಟ್‌ಮೆಂಟ್ ಈಜುಕೊಳದಲ್ಲಿನ ಸಾವು ಹೊರತುಪಡಿಸಿದರೆ ಉಳಿದ ಪ್ರಕರಣಗಳಲ್ಲಿ ಹಿರಿಯರ ನಿರ್ಲಕ್ಷ್ಯ ಎದ್ದು ಕಾಣುವಂತಿದೆ. ಈಜುಕೊಳದಿಂದ ಲಾಭ ಮಾಡಿಕೊಳ್ಳುವಲ್ಲಿ ಉತ್ಸಾಹ ತೋರಿದ ಶಾಲಾ ಆಡಳಿತ ಮಂಡಳಿ, ಸುರಕ್ಷತಾ ಕ್ರಮಗಳನ್ನು ಅನುಸರಿಸುವಲ್ಲಿ ನಿರ್ಲಕ್ಷ್ಯ ತೋರಿರುವುದು ಮೇಲ್ನೋಟದ ವರದಿಗಳಲ್ಲೇ ಸ್ಪಷ್ಟವಾಗುವಂತಿದೆ. ನೀರಿನ ತೊಟ್ಟಿಗಳನ್ನು ಮುಚ್ಚಬೇಕು, ಸಂಪ್‌ಗಳಿಗೆ ಬೀಗ ಹಾಕಬೇಕು ಎನ್ನುವ ಸಾಮಾನ್ಯ ಜವಾಬ್ದಾರಿಯೂ ಇಲ್ಲದೆ ಹೋಗಿರುವುದನ್ನು ಕಲ್ಪಿಸಿಕೊಳ್ಳುವುದೇ ಕಷ್ಟ. ಹಾಗೆ ನೋಡಿದರೆ, ನೀರಿನ ಸಂಪ್‌ನಿಂದ ಆಗುವ ಇಂಥ ದುರ್ಘಟನೆಗಳು ಬೆಂಗಳೂರಿಗೆ ಹೊಸತೇನೂ ಅಲ್ಲ. ಪ್ರತಿವರ್ಷ ಇಂತಹ ದುರ್ಘಟನೆಗಳು ವರದಿಯಾಗುತ್ತಿವೆ. ಪ್ರತಿ ಸಲವೂ ಸುರಕ್ಷತಾ ಕ್ರಮಗಳ ಬಗ್ಗೆ ದಿಗಿಲಿನ ದನಿಯಲ್ಲಿ ಮಾತನಾಡುವ ಪೋಷಕರು ಮತ್ತು ವ್ಯವಸ್ಥೆ, ಸ್ವಲ್ಪ ದಿನಗಳಲ್ಲೇ ಎಲ್ಲವನ್ನೂ ಮರೆತು ಮತ್ತೆ ಮಕ್ಕಳನ್ನು ಈಜುಕೊಳಕ್ಕೆ ಬಿಡುವುದು ನಿರಂತರವಾಗಿ ನಡೆದುಕೊಂಡೇ ಬಂದಿದೆ. ಈ ಆತಂಕ ಮತ್ತೆ ಜಾಗೃತಗೊಳ್ಳಲಿಕ್ಕೆ ಮತ್ತೊಂದು ಮಗು ಸಾವಿಗೀಡಾಗುವ ಮಟ್ಟಿಗೆ ನಮ್ಮ ಸಾರ್ವಜನಿಕ ಪ್ರಜ್ಞೆ ಮೊಂಡಾಗಿದೆ.

ಕಾರಿನಲ್ಲಿ ಆಟವಾಡಲು ಹೋಗಿ ಕೊನೆಯುಸಿರೆಳೆದ ಕಂದಮ್ಮಗಳ ಪ್ರಸಂಗ ಮತ್ತೂ ದಾರುಣವಾದುದು. ಕಾರಿನ ಬಾಗಿಲುಗಳನ್ನು ಭದ್ರಪಡಿಸದೆ ಹೋಗಿರುವುದು ಒಂದು ಲೋಪವಾದರೆ, ಕಾರಿನ ಕಿಟಕಿಗಳಿಗೆ ನಿಷೇಧಿತ ಟಿಂಟೆಡ್ ಗಾಜುಗಳನ್ನು ಬಳಸಿರುವುದು ಮತ್ತೊಂದು ದೋಷ. ಹಿರಿಯರ ಉದಾಸೀನ ಮಕ್ಕಳ ಪಾಲಿಗೆ ಮೃತ್ಯುವಾದ ದುರಂತ ಇಲ್ಲಿನದು.

ಮಕ್ಕಳ ಬಗ್ಗೆ ಎಷ್ಟು ಜಾಗ್ರತೆ ವಹಿಸಿದರೂ ಕಡಿಮೆ ಎನ್ನುವಂಥ ಸಂದರ್ಭ ಇಂದಿನದು. ಕೆಳಗೆ ಬಿದ್ದ ಊಟದ ಡಬ್ಬಿ ತೆಗೆದುಕೊಳ್ಳಲು ಹೋದ ಬಾಲಕಿಯ ಮೇಲೆ ಶಾಲಾ ವಾಹನ ಹರಿಯುವುದು ಅಥವಾ ಶಾಲಾ ಬಸ್‌ಗಳ ಅಪಘಾತಗಳಲ್ಲಿ ಮಕ್ಕಳು ಗಾಯಗೊಳ್ಳುವುದು ಸಾಮಾನ್ಯ ಎನ್ನುವಂತಾಗಿದೆ. ಶಾಲಾ ವಾಹನಗಳಿಗೆ ಸಂಬಂಧಿಸಿದಂತೆ ಸುಪ್ರೀಂಕೋರ್ಟ್ ನಿರ್ದಿಷ್ಟ ಮಾರ್ಗದರ್ಶಿ ಸೂತ್ರಗಳನ್ನು ಗೊತ್ತುಪಡಿಸಿದೆ. ಈ ಸೂತ್ರಗಳನ್ನು ಧಿಕ್ಕರಿಸುವಂತೆ ಎಳೆಯ ಕಂದಮ್ಮಗಳನ್ನು ತುಂಬಿಕೊಂಡು ಓಲಾಡುತ್ತಾ ಸಾಗುವ ವಾಹನಗಳು, ಹ್ಯಾಂಡಲ್ ಬಾರ್‌ನ ಎರಡೂ ಬದಿಗೆ ಹತ್ತಾರು ಕೋಳಿಗಳನ್ನು ನೇತುಹಾಕಿಕೊಂಡು ಸಾಗುವ ಸೈಕಲ್‌ಗಳನ್ನು ನೆನಪಿಸುತ್ತವೆ. ಮಕ್ಕಳ ಮೇಲೆ ನಡೆಯುವ ಲೈಂಗಿಕ ದೌರ್ಜನ್ಯದ ಪ್ರಕರಣಗಳಂತೂ ಮನುಷ್ಯತ್ವದ ಕುರಿತ ನಂಬಿಕೆಗಳನ್ನೇ ಬುಡಮೇಲು ಮಾಡುವಂತಿವೆ. ಮಕ್ಕಳನ್ನು ಮನೆಯ ಒಳಗೂ ಹೊರಗೂ ಪಾಲಕರು ಕಣ್ಣಲ್ಲಿ ಕಣ್ಣಿಟ್ಟು ಕಾಯಬೇಕಾದ ದಿನಗಳಿವು.

ಪಾಶ್ಚಿಮಾತ್ಯ ದೇಶಗಳಲ್ಲಿ ಮಕ್ಕಳ ಸುರಕ್ಷತೆಗೆ ಇನ್ನಿಲ್ಲದ ಒತ್ತು ನೀಡಲಾಗುತ್ತದೆ. ದೇಶದ ಅಭಿವೃದ್ಧಿಯ ಮಾನದಂಡಗಳಲ್ಲಿ ಮಕ್ಕಳು–ಮಹಿಳೆಯರ ಸುರಕ್ಷತೆಯೂ ಸೇರಿದೆ. ಆದರೆ, ನಮ್ಮಲ್ಲಿ ಮಾತ್ರ ಎಳೆಯರ ಸುರಕ್ಷತೆ ಎನ್ನುವುದು ಕನಿಷ್ಠ ಆದ್ಯತೆಯ ಸಂಗತಿ. ಮಕ್ಕಳ ಸುರಕ್ಷತೆಯ ಬಗ್ಗೆ ಸಾಕಷ್ಟು ನಿಗಾ ವಹಿಸದಿರುವುದು ಲೋಪವಷ್ಟೇ ಅಲ್ಲ, ಅದೊಂದು ಸಾಮಾಜಿಕ ಪಾತಕವೂ ಹೌದು.

■ ರಘುನಾಥ ಚ.ಹ.



ಈಶ್ವರ್